सत्यमेव जयते

ಭಾರತ ಸರ್ಕಾರ

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

# ಕಾನೂನುಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧಿನಿಯಮ, 1983

(1983ರ ಅಧಿನಿಯಮ ಸಂಖ್ಯೆ 39)

[8ನೇ ಆಗಸ್ಟ್ 2001 ರಂದು ಇದ್ದಂತೆ]

# THE ILLEGAL MIGRANTS (DETERMINATION BY TRIBUNALS) ACT, 1983

(Act No. 39 of 1983)

[As on the 8th August, 2001]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2001

# ಕಾನೂನುಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧಿನಿಯಮ, 1983

## ಪ್ರಕರಣಗಳ ಅನುಕ್ರಮಣಿಕೆ


### ಅಧ್ಯಾಯ-I

ಪ್ರಕರಣಗಳು :

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅನ್ವಯ
3. ಪರಿಭಾಷೆಗಳು ಮತ್ತು ಉಲ್ಲೇಖಗಳ ಅರ್ಥಾನ್ವಯ
4. ಅಧಿನಿಯಮದ ಅಧ್ಯಾರೋಹಿ ಪರಿಣಾಮ

### ಅಧ್ಯಾಯ-II

### ನ್ಯಾಯಾಧಿಕರಣಗಳ ಸ್ಥಾಪನೆ

5. ಕಾನೂನು ಬಾಹಿರ ವಲಸೆಗಾರರ (ನಿರ್ಧಾರ) ನ್ಯಾಯಾಧಿಕರಣಗಳ ಸ್ಥಾಪನೆ
6. ಖಾಲಿ ಸ್ಥಾನಗಳನ್ನು ತುಂಬುವುದು
7. ನ್ಯಾಯಾಧಿಕರಣಗಳ ಸಿಬ್ಬಂದಿ ವರ್ಗ
8. ನ್ಯಾಯಾಧಿಕರಣಗಳಿಗೆ ಉಲ್ಲೇಖಗಳು ಅಥವಾ ಅರ್ಜಿಗಳನ್ನು ಸಲ್ಲಿಸುವುದು

8ಎ. ಅಭಿಪ್ರಾಯ ಕೋರಿಕೆಗಾಗಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸುವುದು

9. ನ್ಯಾಯಾಧಿಕರಣದ ಅಧಿಕಾರಗಳು
10. 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಉಲ್ಲೇಖಗಳ ಸಂಬಂಧದಲ್ಲಿನ ಪ್ರಕ್ರಿಯೆ
11. 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಗಳ ಸಂಬಂಧದಲ್ಲಿನ ಪ್ರಕ್ರಿಯೆ
12. ವ್ಯಕ್ತಿಯೊಬ್ಬನು ಕಾನೂನುಬಾಹಿರ ವಲಸೆಗಾರನೇ ಹೇಗೆ ಎಂಬ ಪ್ರಶ್ನೆಯ ನಿರ್ಧಾರ
13. ಉಲ್ಲೇಖ ಮತ್ತು ಅರ್ಜಿಯನ್ನು ಆರು ತಿಂಗಳೊಳಗಾಗಿ ಇತ್ಯರ್ಥಪಡಿಸುವುದು
14. ಅಪೀಲು
15. ಅಪೀಲು ನ್ಯಾಯಾಧಿಕರಣ
16. ಅಪೀಲು ನ್ಯಾಯಾಧಿಕರಣದ ಆದೇಶ
17. ಅಪೀಲು ನ್ಯಾಯಾಧಿಕರಣಗಳು ಅಧೀಕ್ಷಿಸುವ ಅಧಿಕಾರ

### ಅಧ್ಯಾಯ-III

### ಎಲ್ಲ ನ್ಯಾಯಾಧಿಕರಣಗಳಿಗೆ ಅನ್ವಯವಾಗುವ ಉಪಬಂಧಗಳು

18. ಪ್ರಕ್ರಿಯೆ
19. ಪ್ರತಿಯೊಂದು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಯು ಕೆಲವು ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯಾಗಿರುವುದು

**ಅಧ್ಯಾಯ-IV**

**ನ್ಯಾಯಾಧಿಕರಣಗಳು ಮಾಡಿದ ಆದೇಶಗಳ ಜಾರಿ**

20. ಕಾನೂನುಬಾಹಿರ ವಲಸೆಗಾರರನ್ನು ಹೊರದೂಡುವುದು ... ...

ಅಧ್ಯಾಯ-V

**ಸಂಕೀರ್ಣ**

21. ಅಧಿಕಾರಗಳ ಪ್ರತ್ಯಾಯೋಜನೆ

21ಎ. ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಗಳ ವಿರುದ್ಧ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಗಳಿಂದ ಬಂಧಪತ್ರಗಳನ್ನು ತೆಗೆದುಕೊಳ್ಳುವ ಅಧಿಕಾರ

22. ಆದೇಶಗಳು ಇತ್ಯಾದಿಗಳನ್ನು ಜಾರಿಗೊಳಿಸುವ ಅಧಿಕಾರ

23. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ

24. ಮಧ್ಯಕಾಲೀನ ಉಪಬಂಧಗಳು

25. ದಂಡಗಳು

26. ಸದ್ಭಾವನೆಯಿಂದ ಕೈಗೊಳ್ಳಲಾದ ಯಾವುದೇ ಕ್ರಮದ ರಕ್ಷಣೆ

27. ತೊಂದರೆಗಳನ್ನು ನಿವಾರಿಸುವ ಅಧಿಕಾರ

28. ನಿಯಮಗಳನ್ನು ರಚಿಸಲು ಅಧಿಕಾರ

29. ನಿರಸನಗಳು ಮತ್ತು ಉಳಿಸುವಿಕೆಗಳು.

ಮುನ್ನುಡಿ

8ನೇ ಆಗಸ್ಟ್ 2001 ರಂದು ಇದ್ದಂತೆ, ಕಾನೂನು ಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧಿನಿಯಮ, 1983ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಇದನ್ನು 10-9-2001 ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 19ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 11 ರಿಂದ 20ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳ) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾದ ಕನ್ನಡದ ಈ ಪಾಠವು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಕಾರ್ಯದರ್ಶಿ,
ವಿಧಾಯೀ ಇಲಾಖೆ
ಭಾರತ ಸರ್ಕಾರ.

PREFACE

This Edition of The Illegal Migrants (Determination By Tribunals)Act, 1983, as on the 8th August 2001, contains the authoritative text of that Act in Kannada which was published in the Gazette of India Extraordinary, part IX ,Section 1, No.1 ,Vol. 19, dated: 10-9-2001 on pages 11 to 20.

This Kannada text was published under the authority of the President under clause (a) of Section 2 of The Authoritative Texts (Central Laws) Act, 1973 is the authoritative text of that Act in Kannada.

New Delhi

Secretary,
Legislative Department,
Government of India.

# ಕಾನೂನು ಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧಿನಿಯಮ, 1983

(1983ರ 39)

ಭಾರತದಿಂದ ಕಾನೂನುಬಾಹಿರ ವಲಸೆಗಾರರನ್ನು ಹೊರದೂಡಲು ಕೇಂದ್ರ ಸರ್ಕಾರಕ್ಕೆ ಅನುಕೂಲವಾಗುವ ಹಾಗೆ, ಒಬ್ಬ ವ್ಯಕ್ತಿಯು ಕಾನೂನು ಬಾಹಿರ ವಲಸೆಗಾರನೇ ಹೇಗೆ ಎಂಬ ಪ್ರಶ್ನೆಯನ್ನು ನ್ಯಾಯವಾದ ರೀತಿಯಲ್ಲಿ ನಿರ್ಧರಿಸಲು ನ್ಯಾಯಾಧಿಕರಣಗಳನ್ನು ಸ್ಥಾಪಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವ ಅಧಿನಿಯಮ.

1971ರ ಮಾರ್ಚ್ 25ನೇ ದಿವಸದಂದು ಮತ್ತು ಆ ತರುವಾಯ ದೇಶದ ಪೂರ್ವ ಮತ್ತು ಈಶಾನ್ಯ ಪ್ರದೇಶಗಳ ಗಡಿಗಳನ್ನು ದಾಟಿ ಭಾರತಕ್ಕೆ ವಲಸೆ ಬಂದಿರುವ ಹೆಚ್ಚಿನ ಸಂಖ್ಯೆಯ ವಿದೇಶೀಯರು, ಅಂಥ ವಲಸೆಯ ಸಂದರ್ಭಗಳ ಮತ್ತು ಅವರ ಜನಾಂಗೀಯ ಸದೃಶ್ಯ ವೈಲಕ್ಷಣ್ಯಗಳ ಮತ್ತು ಭಾರತದ ಜನರೊಂದಿಗೆ ಇರುವ ಇತರ ಸಂಬಂಧಗಳ ಪ್ರಯೋಜನ ಪಡೆದುಕೊಂಡು ಮತ್ತು ಹಾಗೆ ವಲಸೆ ಬಂದಿರುವುದಕ್ಕೆ ಅವರು ಯಾವುದೇ ಕಾನೂನು ಸಮ್ಮತ ಅಧಿಕಾರವನ್ನು ಹೊಂದಿಲ್ಲದಿದ್ದರೂ ಕಾನೂನುಬಾಹಿರವಾಗಿ ಭಾರತದಲ್ಲಿ ಉಳಿದುಕೊಂಡಿರುವುದರಿಂದ;

ಮತ್ತು ಭಾರತದಲ್ಲಿ ಅಂಥ ವಿದೇಶಿಯರ ಮುಂದುವರಿಕೆಯು ಭಾರತದ ಸಾರ್ವಜನಿಕರ ಹಿತಾಸಕ್ತಿಗಳಿಗೆ ಹಾನಿಕರವಾಗಿರುವುದರಿಂದ;

ಮತ್ತು ಅಂಥ ವಿದೇಶಿಯರ ಸಂಖ್ಯೆಯ ಮತ್ತು ಅಂಥ ವಿದೇಶೀಯರು ಗೂಢವಾಗಿ ಭಾರತದ ಪ್ರಜೆಗಳಾಗಿ ಮುಂದುವರಿಯಲು ಪ್ರಯತ್ನಿಸುತ್ತಿರುವ ರೀತಿಯ ಹಾಗೂ ಇತರ ಎಲ್ಲ ಸುಸಂಬದ್ಧ ಸನ್ನಿವೇಶಗಳ ಕಾರಣದಿಂದಾಗಿ ಭಾರತದ ಪ್ರಜೆಗಳ ಹಿತರಕ್ಷಣೆಯ ಬಗ್ಗೆ ಅಸ್ಸಾಮಿನಲ್ಲಿರುವಂಥ ವಿದೇಶೀಯರನ್ನು ಮತ್ತು ಕಾನೂನು ಬಾಹಿರವಾಗಿ ಭಾರತದ ಯಾವುದೇ ಇತರ ಭಾಗದಲ್ಲಿ ಉಳಿದುಕೊಂಡಿರಬಹುದಾದಂಥ ವಿದೇಶೀಯರನ್ನು ಸಹ ಪತ್ತೆ ಮಾಡುವುದಕ್ಕಾಗಿ ವಿಶೇಷ ಉಪಬಂಧಗಳನ್ನು ರಚಿಸುವುದು ಅವಶ್ಯವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಮೂವತ್ನಾಲ್ಕನೆಯ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ-I

## ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕಾನೂನುಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ಅಸ್ಸಾಂ ರಾಜ್ಯದಲ್ಲಿ 1983ರ ಅಕ್ಟೋಬರ್ 15ನೇ ದಿವಸದಂದು ಮತ್ತು ಯಾವುದೇ ಇತರ ರಾಜ್ಯದಲ್ಲಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕುದು ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಈ ಅಧಿನಿಯಮದಲ್ಲಿ ಮಾಡಿರುವ ಉಲ್ಲೇಖಗಳನ್ನು ಯಾವುದೇ ರಾಜ್ಯದ ಸಂಬಂಧದಲ್ಲಿ ಅಂಥ ರಾಜ್ಯದಲ್ಲಿ ಈ ಅಧಿನಿಯಮವು ಪ್ರಾರಂಭವಾದ ದಿನಾಂಕಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕುದು.

2. ಅನ್ವಯ :- ಈ ಅಧಿನಿಯಮದಲ್ಲಿ ಇರುವುದು ಯಾವುದೂ,-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ರಾಜ್ಯದಲ್ಲಿದ್ದು ಆ ರಾಜ್ಯದಿಂದ ಅಥವಾ ಭಾರತದಿಂದ ಹೊರಹಾಕಲಾಗಿರುವ ಯಾವನೇ ವ್ಯಕ್ತಿಗೆ ಅಥವಾ ಅವನ ಸಂಬಂಧದಲ್ಲಿ ಅಥವಾ ಅಂಥ ರಾಜ್ಯದಿಂದ ಅಥವಾ ಭಾರತದಿಂದ ಯಾವ ವ್ಯಕ್ತಿಯ ಹೊರಹಾಕುವಿಕೆಗೆ ಸಂಬಂಧಿಸಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಂಥ ಪ್ರಾರಂಭಕ್ಕೆ ಮುಂಚೆ ಯಾವುದೇ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನ ಸಂಬಂಧದಲ್ಲಿ ;

(ಬಿ) ಭಾರತದ ಯಾವುದೇ ಗಡಿಯನ್ನು ದಾಟಿಬರುವ ಸಮಯದಲ್ಲಿ ವಿದೇಶೀಯನೆಂದು ಪತ್ತೆಯಾದ ಯಾವನೇ ವ್ಯಕ್ತಿಗೆ ಅಥವಾ ಅವನ ಸಂಬಂಧದಲ್ಲಿ;

(ಸಿ) ಸಿಂಧುವಾದ ಪಾಸ್ ಪೋರ್ಟ್ ಅಥವಾ ಪ್ರವಾಸ ದಸ್ತಾವೇಜುಗಳ ಮೇರೆಗೆ ಭಾರತವನ್ನು ಪ್ರವೇಶಿಸಿದ್ದು, ಅಂಥ ಪಾಸ್ ಪೋರ್ಟ್ ಅಥವಾ ಪ್ರವಾಸ ದಸ್ತಾವೇಜುಗಳ ಮೇರೆಗೆ ಭಾರತದಲ್ಲಿ ಉಳಿದುಕೊಳ್ಳಲು ಅಧಿಕಾರ ನೀಡಲಾಗಿದ್ದ ಅವಧಿಯು ಮುಗಿದ ತರುವಾಯವೂ ಅಲ್ಲಿ ಇರುವುದನ್ನು ಮುಂದುವರಿಸಿರುವ ಯಾವನೇ ವಿದೇಶೀಯನಿಗೆ ಅಥವಾ ಅವನ ಸಂಬಂಧದಲ್ಲಿ ಅನ್ವಯವಾಗತಕ್ಕುದಲ್ಲ.

3. ಪರಿಭಾಷೆಗಳು ಮತ್ತು ಉಲ್ಲೇಖಗಳ ಅರ್ಥಾನ್ವಯ :- (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-

(ಎ) " ಅಪೀಲು ನ್ಯಾಯಾಧಿಕರಣ " ಎಂದರೆ, 15ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಸ್ಥಾಪಿಸಿದ ಅಪೀಲು ನ್ಯಾಯಾಧಿಕರಣ;

(ಬಿ) " ವಿದೇಶೀಯ " ಎಂಬ ಪದವು ವಿದೇಶೀಯರ ಅಧಿನಿಯಮ, 1946 (1946ರ 31) ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ;

(ಸಿ) " ಕಾನೂನುಬಾಹಿರ ವಲಸೆಗಾರ " ಎಂದರೆ, ಯಾವ ವ್ಯಕ್ತಿಯ ಸಂಬಂಧದಲ್ಲಿ ಈ ಮುಂದಿನ ಷರತ್ತುಗಳ ಪೈಕಿ ಪ್ರತಿಯೊಂದು ಷರತ್ತು ಈಡೇರುವುದೋ ಆ ಯಾವನೇ ವ್ಯಕ್ತಿ, ಆ ಷರತ್ತುಗಳೆಂದರೆ :-

(i) ಅವನು, 1971ರ ಮಾರ್ಚ್ 25ನೇ ದಿವಸದಂದು ಅಥವಾ ತರುವಾಯ ಪ್ರವೇಶಿಸಿರುವುದು;

(ii) ಅವನು ವಿದೇಶೀಯನಾಗಿರುವುದು;

(iii) ಅವನು ಸಿಂಧುವಾದ ಪಾಸ್ ಪೋರ್ಟ್ ಅಥವಾ ಇತರ ಪ್ರವಾಸ ದಸ್ತಾವೇಜು ಅಥವಾ ಆ ಬಗ್ಗೆ ಯಾವುದೇ ಇತರ ಕಾನೂನುಬದ್ಧ ಪ್ರಾಧಿಕಾರವನ್ನು ಹೊಂದಿಲ್ಲದೆ ಭಾರತವನ್ನು ಪ್ರವೇಶಿಸಿರುವುದು;

(ಡಿ) " ಅಧಿಸೂಚನೆ " ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಇ) " ನಿಯಮಿಸಲಾದುದು " ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಫ್) " ನ್ಯಾಯಾಧಿಕರಣ " ಎಂದರೆ, 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಸ್ಥಾಪಿಸಿದ ನ್ಯಾಯಾಧಿಕರಣ;

(2) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿಲ್ಲದ ಯಾವುದೇ ಕಾನೂನಿಗೆ ಆ ಪ್ರದೇಶಕ್ಕೆ ಸಂಬಂಧಿಸಿ ಈ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಉಲ್ಲೇಖವನ್ನು ಆ ಪ್ರದೇಶದಲ್ಲಿ ಸಂವಾದಿ ಕಾನೂನು ಯಾವುದಾದರೂ ಜಾರಿಯಲ್ಲಿದ್ದರೆ, ಅದಕ್ಕೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

4. ಅಧಿನಿಯಮದ ಅಧ್ಯಾರೋಹಿ ಪರಿಣಾಮ :- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಉಪಬಂಧಗಳು ಪಾಸ್ ಪೋರ್ಟ್ (ಭಾರತಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34) ಅಥವಾ ವಿದೇಶೀಯರ ಅಧಿನಿಯಮ , 1946 (1946ರ 31) ಅಥವಾ ವಲಸೆ ಬಂದವರ (ಅಸ್ಸಾಂನಿಂದ ಹೊರದೂಡುವಿಕೆ) ಅಧಿನಿಯಮ, 1950 (1950ರ 10) ಅಥವಾ ಪಾಸ್ ಪೋರ್ಟ್‌ಗಳ ಅಧಿನಿಯಮ, 1967 (1967ರ 15) ಅಥವಾ ಯಾವುದೇ ಸದರಿ ಅಧಿನಿಯಮಗಳ ಪೈಕಿ ಯಾವುದೇ ಅಧಿನಿಯಮದ ಮೇರೆಗೆ ಮಾಡಿದ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ನಿಯಮದಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ ಪರಿಣಾಮವನ್ನು ಹೊಂದಿರತಕ್ಕುದು.

(2) ವಿಶೇಷವಾಗಿ ಮತ್ತು (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ವಲಸೆ ಬಂದವರ (ಅಸ್ಸಾಂನಿಂದ ಹೊರದೂಡುವಿಕೆ) ಅಧಿನಿಯಮ, 1950ರ (1950ರ 10) 2ನೇ ಪ್ರಕರಣದ ಪರಂತುಕದಲ್ಲಿ ಇರುವುದು ಯಾವುದೂ, 3ನೇ ಪ್ರಕರಣದ (1)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಿದಂತೆ ಒಬ್ಬ ಕಾನೂನುಬಾಹಿರ ವಲಸೆಗಾರನಿಗೆ ಅಥವಾ ಅವನ ಸಂಬಂಧದಲ್ಲಿ ಅನ್ವಯಿಸತಕ್ಕುದಲ್ಲ.

## ಅಧ್ಯಾಯ-II

## ನ್ಯಾಯಾಧಿಕರಣಗಳ ಸ್ಥಾಪನೆ

5. ಕಾನೂನುಬಾಹಿರ ವಲಸೆಗಾರರ (ನಿರ್ಧಾರ) ನ್ಯಾಯಾಧಿಕರಣಗಳ ಸ್ಥಾಪನೆ :- (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವೆಂದು ಭಾವಿಸಬಹುದಾದಷ್ಟು ಕಾನೂನುಬಾಹಿರ ವಲಸೆಗಾರರ (ನಿರ್ಧಾರ) ನ್ಯಾಯಾಧಿಕರಣಗಳನ್ನು ಸ್ಥಾಪಿಸಬಹುದು ಮತ್ತು ಅಂಥ ಪ್ರತಿಯೊಂದು ನ್ಯಾಯಾಧಿಕರಣವು ತನ್ನ ಉಪವೇಶನವನ್ನು ಯಾವ ಪ್ರಮುಖ ಸ್ಥಳದಲ್ಲಿ ಮಾಡತಕ್ಕದ್ದೋ ಅದನ್ನು ಮತ್ತು ಯಾವ ಪ್ರಾದೇಶಿಕ ಪರಿಮಿತಿಗಳಲ್ಲಿ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕುದೋ ಅವುಗಳನ್ನು ನಿರ್ದಿಷ್ಟಪಡಿಸಬಹುದು.

(2) ಯಾವನೇ ವ್ಯಕ್ತಿಯನ್ನು ಅವನು ಯಾವುದೇ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶ ಅಥವಾ ಒಬ್ಬ ಅಡಿಷನಲ್ ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು, ಯಾವುದೇ ಅಂಥ ನ್ಯಾಯಾಧಿಕರಣದ ಸದಸ್ಯನನ್ನಾಗಿ ನೇಮಕ ಮಾಡತಕ್ಕುದಲ್ಲ.

(3) ಪ್ರತಿಯೊಂದು ನ್ಯಾಯಾಧಿಕರಣವು ಇಬ್ಬರು ಸದಸ್ಯರನ್ನೊಳಗೊಂಡಿರತಕ್ಕುದು.

(4) ನ್ಯಾಯಾಧಿಕರಣದ ಸ್ಥಾಪನೆಯ ನಂತರ, ಅದರ ಒಬ್ಬ ಸದಸ್ಯನನ್ನು ಕೇಂದ್ರ ಸರ್ಕಾರವು, ಅಂಥ ನ್ಯಾಯಾಧಿಕರಣದ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕುದು.

(5) ಪ್ರತಿಯೊಂದು ನ್ಯಾಯಾಧಿಕರಣವು, ತನ್ನ ಉಪವೇಶನದ ಮುಖ್ಯ ಸ್ಥಳದಲ್ಲಿ ಮತ್ತು ಅದರ ಅಧ್ಯಕ್ಷನು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಇತರ ಸ್ಥಳ ಅಥವಾ ಸ್ಥಳಗಳಲ್ಲಿ ಉಪವೇಶನ ನಡೆಸತಕ್ಕುದು.

6. ಖಾಲಿ ಸ್ಥಾನಗಳನ್ನು ತುಂಬುವುದು:- ಯಾವುದೇ ಕಾರಣದಿಂದಾಗಿ ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ಸದಸ್ಯನ ಪದದಲ್ಲಿ ಯಾವುದೇ ರಿಕ್ತತೆಯು ಉಂಟಾದರೆ, ಕೇಂದ್ರ ಸರ್ಕಾರವು, 5ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಪೂರೈಸುವ ಯಾವನೇ ವ್ಯಕ್ತಿಯನ್ನು ಅಂಥ ನ್ಯಾಯಾಧಿಕರಣದ ಅಧ್ಯಕ್ಷನನ್ನಾಗಿ ಅಥವಾ ಸಂದರ್ಭಾನುಸಾರ ಸದಸ್ಯನನ್ನಾಗಿ ನೇಮಕ ಮಾಡುವುದರ ಮೂಲಕ ಅಂಥ ಖಾಲಿಸ್ಥಾನವನ್ನು ತುಂಬಬಹುದು.

7. ನ್ಯಾಯಾಧಿಕರಣಗಳ ಸಿಬ್ಬಂದಿ ವರ್ಗ:- ಕೇಂದ್ರ ಸರ್ಕಾರವು, ಪ್ರತಿಯೊಂದು ನ್ಯಾಯಾಧಿಕರಣಕ್ಕೆ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯವಿರಬಹುದಾದಂಥ ಸಿಬ್ಬಂದಿಯನ್ನು ಒದಗಿಸತಕ್ಕುದು.

8. ನ್ಯಾಯಾಧಿಕರಣಗಳಿಗೆ ಉಲ್ಲೇಖಗಳು ಅಥವಾ ಅರ್ಜಿಗಳನ್ನು ಸಲ್ಲಿಸುವುದು :- (1) ಯಾವನೇ ವ್ಯಕ್ತಿಯು, ಕಾನೂನುಬಾಹಿರ ವಲಸೆಗಾರನೇ ಅಥವಾ ಅಲ್ಲವೇ ಎಂಬುದರ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಅಂಥ ಪ್ರಶ್ನೆಯು, ಅಂಥ ವ್ಯಕ್ತಿಯನ್ನು ಭಾರತದಲ್ಲಿ ಉಳಿದುಕೊಳ್ಳದಿರುವಂತೆ ಅಥವಾ ಯಾವುದೇ ಇತರ ಅರ್ಥದಲ್ಲಿ ಅಗತ್ಯಪಡಿಸುವ ವಿದೇಶೀಯರ ಅಧಿನಿಯಮ, 1946ರ ಮೇರೆಗೆ ಯಾವುದೇ ಆದೇಶದ ವಿರುದ್ಧವಾಗಿ ಅವನು ಸಲ್ಲಿಸಿದ ನಿವೇದನೆಯ ಮೇಲೆಯಾಗಲೀ ಅಥವಾ ಯಾವುದೇ ಇತರ ರೀತಿಯಲ್ಲಾಗಲೀ ಉದ್ಭವಿಸಿರಲಿ, ಅಂಥ ಪ್ರಶ್ನೆಯನ್ನು ನಿರ್ಣಯಕ್ಕಾಗಿ ನ್ಯಾಯಾಧಿಕರಣಕ್ಕೆ ಉಲ್ಲೇಖಿಸಬಹುದು.

(2) ಯಾವನೇ ವ್ಯಕ್ತಿಯು, ಅರ್ಜಿಯಲ್ಲಿ ಯಾರ ಹೆಸರು ಮತ್ತು ಇತರ ವಿವರಗಳನ್ನು ಕೊಡಲಾಗಿದೆಯೋ ಆ ವ್ಯಕ್ತಿಯು ಒಬ್ಬ ಕಾನೂನುಬಾಹಿರ ವಲಸೆಗಾರನೇ ಅಥವಾ ಅಲ್ಲವೇ ಎಂಬ ಬಗ್ಗೆ ತೀರ್ಮಾನಕ್ಕಾಗಿ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಸಲ್ಲಿಸಬಹುದು :

ಪರಂತು, ಯಾವ ವ್ಯಕ್ತಿಯ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ವ್ಯಕ್ತಿಯು, ಯಾವ ಪೊಲೀಸ್ ಠಾಣೆಯ ಅಧಿಕಾರ ವ್ಯಾಪ್ತಿಯೊಳಗೆ ಅರ್ಜಿದಾರನು ತನ್ನ ವಾಸಸ್ಥಳವನ್ನು ಹೊಂದಿರುವನೋ ಅದೇ ಪೊಲೀಸು ಠಾಣೆಯ ಅಧಿಕಾರ ವ್ಯಾಪ್ತಿಯೊಳಗೆ ಕಂಡುಬಂದ ಅಥವಾ ವಾಸವಾಗಿರುವ ಹೊರತು ನ್ಯಾಯಾಧಿಕರಣವು ಯಾವುದೇ ಅಂಥ ಅರ್ಜಿಯನ್ನು ಪುರಸ್ಕರಿಸತಕ್ಕುದಲ್ಲ.

(3) (2)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸತಕ್ಕುದು ಮತ್ತು ಅರ್ಜಿಯಲ್ಲಿ ಉಲ್ಲೇಖಿಸಿದ ವ್ಯಕ್ತಿಯು ಕಂಡುಬರುವಂಥದೇ ಅಥವಾ ವಾಸಿಸುತ್ತಿರುವಂಥದೇ ಪೊಲೀಸು ಠಾಣೆಯ ಅಧಿಕಾರ ವ್ಯಾಪ್ತಿಯೊಳಗೆ ವಾಸಿಸುತ್ತಿರುವ ಇಬ್ಬರಿಗಿಂತ ಕಡಿಮೆ ಇಲ್ಲದ ವ್ಯಕ್ತಿಗಳು, ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳನ್ನು ಸಮರ್ಥಿಸಿ ಪ್ರಮಾಣ ಮಾಡಿದ ಅಫಿಡಾವಿತ್ತುಗಳನ್ನು ಲಗತ್ತಿಸಿರತಕ್ಕುದು, ಮತ್ತು ನಿಯಮಿಸಬಹುದಾದಂತೆ ಹತ್ತು ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಒಂದು ನೂರು ರೂಪಾಯಿಗಿಂತ ಹೆಚ್ಚಿಲ್ಲದ ಫೀಜನ್ನು ಸಹ ಲಗತ್ತಿಸಿರತಕ್ಕುದು.

(4) (1)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಉಲ್ಲೇಖವನ್ನು, ಅಂಥ ಉಲ್ಲೇಖವನ್ನು ಮಾಡುವ ಕಾಲದಲ್ಲಿ, ಅಂಥ ಉಲ್ಲೇಖದಲ್ಲಿ ಹೆಸರಿಸಿರುವ ವ್ಯಕ್ತಿಯ ವಾಸಸ್ಥಳವು ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಇರುವುದೋ ಆ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದು:

ಪರಂತು, ಅಂಥ ವ್ಯಕ್ತಿಯು ಯಾವುದೇ ವಾಸಸ್ಥಳವನ್ನು ಹೊಂದಿಲ್ಲದಿರುವಲ್ಲಿ, ಆ ಉಲ್ಲೇಖವನ್ನು, ಅಂಥ ಉಲ್ಲೇಖವನ್ನು ಮಾಡುವ ಕಾಲದಲ್ಲಿ ಅಂಥ ವ್ಯಕ್ತಿಯು ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಕಂಡುಬರುವನೋ, ಆ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದು.

(5) (2)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು, ಅಂಥ ಅರ್ಜಿಯಲ್ಲಿ ಹೆಸರಿಸಿರುವ ವ್ಯಕ್ತಿಯು ಅಂಥ ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಕಂಡುಬರುವನೋ ಅಥವಾ ಸಂದರ್ಭಾನುಸಾರ ಅವನು ತನ್ನ ವಾಸಸ್ಥಳವನ್ನು ಹೊಂದಿರುವನೋ ಆ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದು.

8ಎ. ಅಭಿಪ್ರಾಯ ಕೋರಿಕೆಗಾಗಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸುವುದು :- (1) ಯಾವ ವ್ಯಕ್ತಿಯ ಹೆಸರು ಮತ್ತು ಇತರ ವಿವರಗಳನ್ನು ಅರ್ಜಿಯಲ್ಲಿ ನೀಡಲಾಗಿದೆಯೋ ಆ ವ್ಯಕ್ತಿಯು ಕಾನೂನು ಬಾಹಿರ ವಲಸೆಗಾರನಾಗಿದ್ದಾನೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ನ್ಯಾಯಾಧಿಕರಣದ ತೀರ್ಮಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಯಾವನೇ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಂಥ ಯಾವುದೇ ಅರ್ಜಿಯನ್ನು ಕೇಂದ್ರ ಸರ್ಕಾರವು ಸ್ವೀಕರಿಸಿರುವಲ್ಲಿ, ಅದು ತನ್ನಲ್ಲಿರುವ ಯಾವುದೇ ಮಾಹಿತಿಯ ಆಧಾರದ ಮೇಲೆ ಅಥವಾ ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಆ ಅರ್ಜಿಯು ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿದೆಯೆಂಬ ಅಥವಾ ಈ ಪ್ರಕರಣದ ಅಗತ್ಯತೆಗಳನ್ನು ಪಾಲಿಸುವುದಿಲ್ಲವೆಂಬ ಆಧಾರದ ಮೇಲೆ ಆ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಅಂಥ ಅರ್ಜಿಯನ್ನು ತೀರ್ಮಾನಕ್ಕಾಗಿ ನ್ಯಾಯಾಧಿಕರಣಕ್ಕೆ ಕಳಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಲಾಗುವ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸತಕ್ಕುದು ಮತ್ತು ಅರ್ಜಿದಾರನು ಯಾವ ರೆವಿನ್ಯೂ ಉಪ ವಿಭಾಗದಲ್ಲಿ ವಾಸವಾಗಿರುವನೋ ಅದೇ ಉಪ ವಿಭಾಗದ

ಅಧಿಕಾರ ವ್ಯಾಪ್ತಿಯೊಳಗೆ ವಾಸಿಸುತ್ತಿರುವ ಇನ್ನೊಬ್ಬ ವ್ಯಕ್ತಿಯು, ಅರ್ಜಿಯಲ್ಲಿ ನಮೂದಿಸಲಾದ ವಿವರಗಳು ತನ್ನ ತಿಳಿವಳಿಕೆ, ಮಾಹಿತಿ ಮತ್ತು ನಂಬಿಕೆಯ ಮಟ್ಟಿಗೆ ನಿಜವಾಗಿವೆ ಎಂದು ನಿಯಮಿಸಬಹುದಾದಂಥ ನಮೂನೆಯಲ್ಲಿ ಮಾಡಿದ ಘೋಷಣೆಯು ಆ ಅರ್ಜಿಯೊಂದಿಗೆ ಇರತಕ್ಕುದು :

ಪರಂತು, ಯಾವನೇ ವ್ಯಕ್ತಿಯು ಹತ್ತಕ್ಕಿಂತ ಹೆಚ್ಚು ಅಂಥ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ ಅಥವಾ ಹತ್ತಕ್ಕಿಂತ ಹೆಚ್ಚು ಅಂಥ ಘೋಷಣೆಗಳನ್ನು ಮಾಡತಕ್ಕುದಲ್ಲ.

(3) (1)ನೇ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ಉಲ್ಲೇಖವನ್ನು, ಅಂಥ ಉಲ್ಲೇಖವನ್ನು ಮಾಡುವ ಕಾಲದಲ್ಲಿ, ಅಂಥ ಉಲ್ಲೇಖದಲ್ಲಿ ಹೆಸರಿಸಲಾದ ವ್ಯಕ್ತಿಯ ವಾಸಸ್ಥಳವು ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಇರುವುದೋ ಆ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದು:

ಪರಂತು, ಅಂಥ ವ್ಯಕ್ತಿಯು ಯಾವುದೇ ವಾಸಸ್ಥಳವನ್ನು ಹೊಂದಿಲ್ಲದಿರುವಲ್ಲಿ, ಆ ಉಲ್ಲೇಖವನ್ನು, ಅಂಥ ಉಲ್ಲೇಖವನ್ನು ಮಾಡುವ ಕಾಲದಲ್ಲಿ ಅಂಥ ವ್ಯಕ್ತಿಯು ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳೊಳಗೆ ಕಂಡುಬರುವನೋ ಆ ನ್ಯಾಯಾಧಿಕರಣಕ್ಕೆ ಸಲ್ಲಿಸತಕ್ಕುದು.

9. ನ್ಯಾಯಾಧಿಕರಣದ ಅಧಿಕಾರಗಳು :- ಪ್ರತಿಯೊಂದು ನ್ಯಾಯಾಧಿಕರಣವು ಕೆಳಕಂಡವುಗಳ ಸಂಬಂಧದಲ್ಲಿ ದಾವೆಯನ್ನು ವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವ ಅಧಿಕಾರಗಳನ್ನೇ ಹೊಂದಿರತಕ್ಕುದು, ಎಂದರೆ :-

(ಎ) ಸಾಕ್ಷಿದಾರರ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸಿ ಅವರನ್ನು ಪ್ರಶ್ನಿಸುವುದು ;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು ;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು ;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಸರ್ಕಾರಿ ದಾಖಲೆಗಳ ಬಗ್ಗೆ ಆಜ್ಞಾ ಕೋರಿಕೆ ಮಾಡುವುದು ;

(ಇ) ಸಾಕ್ಷಿದಾರರನ್ನು ಪ್ರಶ್ನಿಸುವುದಕ್ಕಾಗಿ ಯಾವುದೇ ಕಮೀಷನ್ ಹೊರಡಿಸುವುದು ;

10. 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ ಉಲ್ಲೇಖಗಳ ಸಂಬಂಧದಲ್ಲಿನ ಪ್ರಕ್ರಿಯೆ :- 8ನೇ ಪ್ರಕರಣದ ಅಥವಾ 8ಎ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಉಲ್ಲೇಖವನ್ನು ಸ್ವೀಕರಿಸಿದ ನಂತರ ನ್ಯಾಯಾಧಿಕರಣವು ಉಲ್ಲೇಖದಲ್ಲಿ ಹೆಸರಿಸಿರುವ ವ್ಯಕ್ತಿಗೆ, ನೋಟೀಸು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಅವನು ಉಲ್ಲೇಖದಲ್ಲಿ ಮಾಡಿದ ದೃಢೋಕ್ತಿಗಳನ್ನು ಕುರಿತಂತೆ, ಅವನ ಅಂಥ ಪ್ರತಿವಾದದ ಸಮರ್ಥನೆಯಲ್ಲಿ ಅವನು ಯೋಗ್ಯವೆಂದು ಭಾವಿಸಬಹುದಾದಂಥ ಮನವಿಯನ್ನು ಸಲ್ಲಿಸುವಂತೆ ಮತ್ತು ಸಾಕ್ಷ್ಯವನ್ನು ಹಾಜರುಪಡಿಸುವಂತೆ ಅವನನ್ನು ಅಗತ್ಯಪಡಿಸಿ, ಅಂಥ ಉಲ್ಲೇಖದ ಪ್ರತಿಯನ್ನು ಲಗತ್ತಿಸಿ ನೋಟೀಸನ್ನು ಜಾರಿಗೊಳಿಸತಕ್ಕುದು:

ಪರಂತು, ಮೇಲೆ ಹೇಳಿದ ವ್ಯಕ್ತಿಯು ಸದರಿ ಮೂವತ್ತು ದಿವಸಗಳ ಅವಧಿಯೊಳಗೆ ಮನವಿಯನ್ನು ಸಲ್ಲಿಸುವಲ್ಲಿ ಮತ್ತು ಅವನ ಪ್ರತಿವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಹಾಜರುಪಡಿಸುವಲ್ಲಿ ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ಆದೇಶದ ಮೂಲಕ ಹಾಗೆ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿವಸಗಳಿಗೆ ಮೀರದಂಥ ಹೆಚ್ಚಿನ ಅವಧಿಯೊಳಗೆ, ಅವನ ಮನವಿಯನ್ನು ಸಲ್ಲಿಸಲು ಮತ್ತು ಅವನ ಪ್ರತಿವಾದದ ಸಮರ್ಥನೆಯಲ್ಲಿ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿಯನ್ನು ನೀಡಬಹುದು.

11. 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಗಳ ಸಂಬಂಧದಲ್ಲಿನ ಪ್ರಕ್ರಿಯೆ :- (1) 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ನಂತರ, ನ್ಯಾಯಾಧಿಕರಣವು, ನಿಯಮಿಸಿದ ಪ್ರಾಧಿಕಾರಕ್ಕೆ, ಆ ಪ್ರಾಧಿಕಾರವು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅರ್ಜಿಯಲ್ಲಿ ಮಾಡಿರುವ ದೃಢೋಕ್ತಿಗಳ ಸಂಬಂಧವಾಗಿ ನ್ಯಾಯಾಧಿಕರಣಕ್ಕೆ ವರದಿಯನ್ನು ಸಲ್ಲಿಸುವಂತೆ ಅಗತ್ಯಪಡಿಸಿ ಅರ್ಜಿಯ ಪ್ರತಿಯ ಜೊತೆ ನೋಟೀಸನ್ನು ನೀಡತಕ್ಕುದು.

(2) ನಿಯಮಿಸಿದ ಪ್ರಾಧಿಕಾರವು ಸಲ್ಲಿಸಿದ ವರದಿಯ ಪರಿಶೀಲನೆಯ ನಂತರ,-

(ಎ) ಅರ್ಜಿಯಲ್ಲಿ ಹೆಸರಿಸಿರುವ ವ್ಯಕ್ತಿಯು, ಕಾನೂನುಬಾಹಿರ ವಲಸೆಗಾರನಲ್ಲವೆಂದು ಅಥವಾ ಆ ಅರ್ಜಿಯು ಕ್ಷುಲ್ಲಕವಾದುದೆಂದು ಅಥವಾ ಕಿರುಕುಳಕಾರಿ ಎಂದು ಅಥವಾ ಸದ್ಭಾವನೆಯಿಂದ ಮಾಡಿದ್ದಲ್ಲವೆಂದು ನ್ಯಾಯಾಧಿಕರಣವು ಮನದಟ್ಟು ಮಾಡಿಕೊಂಡರೆ, ಅದು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಅರ್ಜಿಯನ್ನು ತಿರಸ್ಕರಿಸತಕ್ಕುದು ;

(ಬಿ) ಅರ್ಜಿಯಲ್ಲಿ ಹೆಸರಿಸಿದ ವ್ಯಕ್ತಿಯು ಒಬ್ಬ ಕಾನೂನುಬಾಹಿರ ವಲಸೆಗಾರನೆಂದು ನಂಬಲು ಯುಕ್ತ ಆಧಾರಗಳು ಇವೆಯೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು, ಅರ್ಜಿಯಲ್ಲಿ ಹೆಸರಿಸಿದ ವ್ಯಕ್ತಿಗೆ, ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು

ದಿನಗಳೊಳಗೆ ಅರ್ಜಿಯಲ್ಲಿ ಮಾಡಿದ ದೃಢೋಕ್ತಿಗಳ ಬಗ್ಗೆ ಅವನ ಪ್ರತಿವಾದದ ಸಮರ್ಥನೆಯಲ್ಲಿ ಅವನು ಯೋಗ್ಯವೆಂದು ಭಾವಿಸಬಹುದಾದಂಥ ಮನವಿಯನ್ನು ಸಲ್ಲಿಸುವಂತೆ ಮತ್ತು ಸಾಕ್ಷ್ಯವನ್ನು ಹಾಜರುಪಡಿಸುವಂತೆ ಅವನನ್ನು ಅಗತ್ಯಪಡಿಸಿ ಅರ್ಜಿಯ ಪ್ರತಿಯ ಜೊತೆ ನೋಟೀಸನ್ನು ನೀಡತಕ್ಕುದು :

ಪರಂತು, ಮೇಲೆ ಹೇಳಿದ ವ್ಯಕ್ತಿಯು ಅವನ ಮನವಿಯನ್ನು ಸಲ್ಲಿಸುವುದರಿಂದ ಮತ್ತು ಸದರಿ 30 ದಿವಸಗಳ ಅವಧಿಯೊಳಗೆ ಅವನ ಪ್ರತಿವಾದದ ಸಮರ್ಥನೆಯಾಗಿ ಸಾಕ್ಷ್ಯವನ್ನು ಹಾಜರುಪಡಿಸಲು ಸಾಕಷ್ಟು ಕಾರಣದಿಂದ ಪ್ರತಿಬಂಧಿತನಾಗಿದ್ದನೆಂದು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು, ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿವಸಗಳನ್ನು ಮೀರದಂಥ ಹೆಚ್ಚಿನ ಅವಧಿಯೊಳಗೆ, ಅವನಿಗೆ ತನ್ನ ಮನವಿಯನ್ನು ಸಲ್ಲಿಸಲು ಮತ್ತು ತನ್ನ ಪ್ರತಿವಾದದ ಸಮರ್ಥನೆಗೆ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿಯನ್ನು ನೀಡಬಹುದು.

12. ವ್ಯಕ್ತಿಯೊಬ್ಬನು ಕಾನೂನುಬಾಹಿರ ವಲಸೆಗಾರನೇ ಹೇಗೆ ಎಂಬ ಪ್ರಶ್ನೆಯ ನಿರ್ಧಾರ :- (1) ಯಾವ ನ್ಯಾಯಾಧಿಕರಣಕ್ಕೆ 8ನೇ ಪ್ರಕರಣದ ಅಥವಾ 8ಎ ಪ್ರಕರಣದ ಮೇರೆಗೆ ಉಲ್ಲೇಖವನ್ನು ಮಾಡಲಾಗಿದೆಯೋ ಅಥವಾ 8ನೇ ಪ್ರಕರಣದ ಮೇರೆಗೆ ಒಂದು ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ನ್ಯಾಯಾಧಿಕರಣವು, ಅದರ ಮುಂದೆ ಮಂಡಿಸಬಹುದಾದಂಥ ಸಾಕ್ಷ್ಯವನ್ನು ತೆಗೆದುಕೊಂಡ ತರುವಾಯ ಮತ್ತು ಅದು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಅದು ಯುಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳ ಅಹವಾಲನ್ನು ಕೇಳಿದ ತರುವಾಯ, ಆದೇಶದ ಮೂಲಕ ಸಂದರ್ಭಾನುಸಾರ ಅಂಥ ಉಲ್ಲೇಖ ಅಥವಾ ಅರ್ಜಿಯಲ್ಲಿ ಹೆಸರಿಸಿದ ವ್ಯಕ್ತಿಯು ಒಬ್ಬ ಕಾನೂನುಬಾಹಿರ ವಲಸೆಗಾರನೇ ಅಥವಾ ಅಲ್ಲವೇ ಎಂಬ ಪ್ರಶ್ನೆಯ ಬಗ್ಗೆ ನಿರ್ಧಾರ ಮಾಡತಕ್ಕುದು :

ಪರಂತು, ಯಾವುದೇ ಸಂದರ್ಭದಲ್ಲಿ ಅಂಥ ಪ್ರಶ್ನೆಯ ನಿರ್ಧಾರಕ್ಕಾಗಿ, ಯಾವುದೇ ವಿವಾದದ ಬಗ್ಗೆ ಕೈಗೊಂಡ ತೀರ್ಮಾನವು, ಇತರ ಯಾವುದೇ ವಿವಾದ ಅಥವಾ ವಿವಾದಗಳ ಬಗ್ಗೆ ಕೈಗೊಂಡ ಯಾವುದೇ ತೀರ್ಮಾನವನ್ನು ಅನಾವಶ್ಯಕಗೊಳಿಸುವಲ್ಲಿ, ನ್ಯಾಯಾಧಿಕರಣವು ಅಂಥ ಇತರ ವಿವಾದ ಅಥವಾ ವಿವಾದಗಳನ್ನು ತೀರ್ಮಾನಿಸತಕ್ಕುದಲ್ಲ.

(2) ಯಾವುದೇ ವಿಷಯದ ಬಗ್ಗೆ ನ್ಯಾಯಾಧಿಕರಣದ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾಗಿರುವಲ್ಲಿ, ನ್ಯಾಯಾಧಿಕರಣದ ಅಧ್ಯಕ್ಷನು ಯಾವ ವಿಷಯ ಅಥವಾ ವಿಷಯಗಳ ಬಗ್ಗೆ ಅವರಲ್ಲಿ ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ತಿಳಿಸತಕ್ಕುದು ಮತ್ತು ಆ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಂಥ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಉಲ್ಲೇಖವನ್ನು ಸಲ್ಲಿಸತಕ್ಕದು ; ಅವನು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಇನ್ನೊಂದು ನ್ಯಾಯಾಧಿಕರಣದ ಸದಸ್ಯನಿಂದ ಅಂಥ ವಿಷಯ ಅಥವಾ ವಿಷಯಗಳ ಬಗ್ಗೆ ಸುನಾವಣೆಗಾಗಿ ಆ ಪ್ರಕರಣವನ್ನು ಉಲ್ಲೇಖಿಸತಕ್ಕುದು ಮತ್ತು ಅಂಥ ವಿಷಯ ಅಥವಾ ವಿಷಯಗಳನ್ನು ಆ ಸದಸ್ಯನ ಅಭಿಪ್ರಾಯಕ್ಕೆ ಅನುಸಾರವಾಗಿ ತೀರ್ಮಾನಿಸತಕ್ಕುದು ಮತ್ತು ಅಂಥ ತೀರ್ಮಾನವನ್ನು ನ್ಯಾಯಾಧಿಕರಣದ ತೀರ್ಮಾನವೆಂದು ಭಾವಿಸತಕ್ಕುದು.

(3) ನ್ಯಾಯಾಧಿಕರಣವು, ಅದು ಹೊರಡಿಸಿದ ಪ್ರತಿಯೊಂದು ಆದೇಶದ ಪ್ರತಿಯನ್ನು ನಿಯಮಿಸಿದ ಪ್ರಾಧಿಕಾರಕ್ಕೆ ಅಥವಾ ಪ್ರಾಧಿಕಾರಗಳಿಗೆ ಮತ್ತು ಸಂಧರ್ಭಾನುಸಾರ ಉಲ್ಲೇಖದ ಅಥವಾ ಅರ್ಜಿಯ ಪಕ್ಷಕಾರರಿಗೆ ಕಳುಹಿಸತಕ್ಕುದು.

(4) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವು, ಅಪೀಲು ನ್ಯಾಯಾಧಿಕರಣದ ತೀರ್ಮಾನಕ್ಕೊಳಪಟ್ಟು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

13. ಉಲ್ಲೇಖ ಮತ್ತು ಅರ್ಜಿಯನ್ನು ಆರು ತಿಂಗಳೊಳಗಾಗಿ ಇತ್ಯರ್ಥಪಡಿಸುವುದು :- 8ನೇ ಪ್ರಕರಣದ ಅಥವಾ 8ಎ ಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಮಾಡಿದ ಪ್ರತಿಯೊಂದು ಉಲ್ಲೇಖವನ್ನು ಅಥವಾ 8ನೇ ಪ್ರಕರಣದ ಮೇರೆಗೆ ನ್ಯಾಯಾಧಿಕರಣಕ್ಕೆ ಮಾಡಿದ ಅರ್ಜಿಯನ್ನು ಆದಷ್ಟು ತ್ವರಿತವಾಗಿ ವಿಚಾರಣೆ ಮಾಡತಕ್ಕುದು ಮತ್ತು ಅಂಥ ಉಲ್ಲೇಖ ಅಥವಾ ಅರ್ಜಿಯ ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಜಾರಿಮಾಡಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ಅಂಥ ವಿಚಾರಣೆಯನ್ನು ಮುಗಿಸುವ ಪ್ರಯತ್ನವನ್ನು ಮಾಡತಕ್ಕುದು.

14. ಅಪೀಲು :- ಕೇಂದ್ರ ಸರ್ಕಾರ, ಅಥವಾ 8ನೇ ಪ್ರಕರಣದ ಮೇರೆಗಿನ ಉಲ್ಲೇಖ ಅಥವಾ ಅರ್ಜಿಯಲ್ಲಿ ಹೆಸರಿಸಿದ ಯಾವನೇ ವ್ಯಕ್ತಿ, ಅಥವಾ ಆ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಯಾವನೇ ಅರ್ಜಿದಾರನು ಅಥವಾ 8ಎ ಪ್ರಕರಣದ ಮೇರೆಗಿನ ಉಲ್ಲೇಖದಲ್ಲಿ ಹೆಸರಿಸಲಾದ ಯಾವನೇ ವ್ಯಕ್ತಿಯು 12ನೇ ಪ್ರಕರಣದ ಮೇರೆಗೆ ನ್ಯಾಯಾಧಿಕರಣವು ಮಾಡಿದ ಯಾವುದೇ ಆದೇಶದಿಂದ ಅದು ಅಥವಾ ಅವನು ಸಮಾಧಾನ ಹೊಂದಿಲ್ಲದಿದ್ದರೆ ಅಂಥ ಆದೇಶದ ವಿರುದ್ಧ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

15. ಅಪೀಲು ನ್ಯಾಯಾಧಿಕರಣ :- (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮವು ಜಾರಿಯಲ್ಲಿರುವ ಪ್ರತಿಯೊಂದು ರಾಜ್ಯಕ್ಕಾಗಿ, ಆ ರಾಜ್ಯದಲ್ಲಿ ನ್ಯಾಯಾಧಿಕರಣವು ಮಾಡಿದ ಆದೇಶದ ವಿರುದ್ಧ 14ನೇ ಪ್ರಕರಣದ ಮೇರೆಗೆ ಹೂಡಲಾದ ಅಪೀಲುಗಳ ತೀರ್ಮಾನಕ್ಕಾಗಿ ಕಾನೂನು ಬಾಹಿರ ವಲಸೆಗಾರರ (ನಿರ್ಧಾರ) ಅಪೀಲು ನ್ಯಾಯಾಧಿಕರಣ ಎಂದು ಕರೆಯುವ ಒಂದು ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸಬಹುದು ಮತ್ತು ಅಂಥ ನ್ಯಾಯಾಧಿಕರಣದ ಉಪವೇಶನದ ಮುಖ್ಯ ಸ್ಥಳವನ್ನು ನಿರ್ದಿಷ್ಟಪಡಿಸಬಹುದು.

-

(2) ಯಾವನೇ ವ್ಯಕ್ತಿಯು ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿರುವ, ಅಥವಾ ಆಗಿದ್ದ ಹೊರತು, ಅವನನ್ನು ಅಪೀಲು ನ್ಯಾಯಾಧಿಕರಣದ ಸದಸ್ಯನನ್ನಾಗಿ ನೇಮಕ ಮಾಡತಕ್ಕುದಲ್ಲ.

(3) ಒಂದು ಅಪೀಲು ನ್ಯಾಯಾಧಿಕರಣವು ಕೇಂದ್ರ ಸರ್ಕಾರವು ಯೋಗ್ಯವೆಂದು ಭಾವಿಸಬಹುದಾದಂತೆ ಇಬ್ಬರಿಗಿಂತ ಕಡಿಮೆ ಇಲ್ಲದ ಮತ್ತು ಆರು ಜನರಿಗಿಂತ ಹೆಚ್ಚಿಲ್ಲದಷ್ಟು ಸದಸ್ಯರನ್ನೊಳಗೊಂಡಿರತಕ್ಕುದು.

(4) ಕೇಂದ್ರ ಸರ್ಕಾರವು, ಅಪೀಲು ನ್ಯಾಯಾಧಿಕರಣದ ಸದಸ್ಯನೊಬ್ಬನನ್ನು ಅದರ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕುದು.

(5) ಅಪೀಲು ನ್ಯಾಯಾಧಿಕರಣವು, ಉಪವೇಶನದ ಅದರ ಮುಖ್ಯ ಸ್ಥಳದಲ್ಲಿ ಅಥವಾ ಅದರ ಅಧ್ಯಕ್ಷನು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಯಾವುದೇ ಇತರ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಉಪವೇಶನ ನಡೆಸತಕ್ಕುದು.

(6) ಅಪೀಲು ನ್ಯಾಯಾಧಿಕರಣದ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು, ಅಧ್ಯಕ್ಷನು ಅದರ ಸದಸ್ಯರ ಪೈಕಿ ರಚಿಸಿದ ನ್ಯಾಯ ಪೀಠಗಳು ಚಲಾಯಿಸಬಹುದು ಮತ್ತು ನಿರ್ವಹಿಸಬಹುದು ಮತ್ತು ಅವು ಏಕ ಸದಸ್ಯ ನ್ಯಾಯಪೀಠಗಳಾಗಿರಬಹುದು ಅಥವಾ ಇಬ್ಬರಿಗಿಂತ ಕಡಿಮೆಯಿಲ್ಲದ ಸದಸ್ಯರನ್ನೊಳಗೊಂಡ ನ್ಯಾಯಪೀಠಗಳಾಗಿರಬಹುದು.

(7) ಕೇಂದ್ರ ಸರ್ಕಾರವು ಪ್ರತಿಯೊಂದು ನ್ಯಾಯಾಧಿಕರಣಕ್ಕೆ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯವಿರಬಹುದಾದಂಥ ಸಿಬ್ಬಂದಿಯನ್ನು ಒದಗಿಸಿಕೊಡತಕ್ಕುದು.

(8) ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸುವ ಅಪೀಲಿನ ಪ್ರತಿಯೊಂದು ಜ್ಞಾಪನ ಪತ್ರವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಸಲ್ಲಿಸತಕ್ಕುದು, ಮತ್ತು 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅರ್ಜಿದಾರನು ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ಇಪ್ಪತ್ತೈದು ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಮತ್ತು ಒಂದು ನೂರು ರೂಪಾಯಿಗಳಿಗಿಂತ ಹೆಚ್ಚಿಲ್ಲದಷ್ಟು ಶುಲ್ಕವನ್ನು ಸಹ ಅದಕ್ಕೆ ಲಗತ್ತಿಸಿರತಕ್ಕುದು.

(9) ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಿಕೊಳ್ಳಬಯಸಲಾಗಿದೆಯೋ ಆ ಆದೇಶವನ್ನು ಅಪೀಲುದಾರನಿಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಅಂಥ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕುದು :

ಪರಂತು, ಅಪೀಲುದಾರನು ಸದರಿ ಅವಧಿಯೊಳಗೆ ಅಪೀಲು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ಅದು ಮೇಲೆ ಹೇಳಿದ ಮೂವತ್ತು ದಿವಸಗಳ ಅವಧಿಯ ಮುಕ್ತಾಯದ ತರುವಾಯ ಅಪೀಲನ್ನು ಅಂಗೀಕರಿಸಬಹುದು.

(10) ಪ್ರತಿಯೊಂದು ಅಪೀಲು ನ್ಯಾಯಾಧಿಕರಣವು ಅಪೀಲನ್ನು ವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ :-

(ಎ) ಸಾಕ್ಷಿದಾರರ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸಿ ಅವರನ್ನು ಪ್ರಶ್ನಿಸುವುದು ;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವುದು ಮತ್ತು ಹಾಜರ್ಪಡಿಸುವುದು ;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು ;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಸರ್ಕಾರಿ ದಾಖಲೆಗಳ ಬಗ್ಗೆ ಅಜ್ಞಾ ಕೋರಿಕೆ ಮಾಡುವುದು;

(ಇ) ಸಾಕ್ಷಿದಾರರನ್ನು ಪ್ರಶ್ನಿಸುವುದಕ್ಕಾಗಿ ಯಾವುದೇ ಕಮೀಷನ್ ಹೊರಡಿಸುವುದು.

16. ಅಪೀಲು ನ್ಯಾಯಾಧಿಕರಣದ ಆದೇಶ :- (1) ಅಪೀಲು ನ್ಯಾಯಾಧಿಕರಣವು, ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಅದು ಯೋಗ್ಯವೆಂದು ಭಾವಿಸಬಹುದಾದಂತೆ ಯಾವ ಆದೇಶದ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸುವ, ಮಾರ್ಪಾಟು ಮಾಡುವ ಅಥವಾ ರದ್ದುಗೊಳಿಸುವ ಆದೇಶವನ್ನು ಮಾಡಬಹುದು ಅಥವಾ ವಿಷಯವನ್ನು ಅಂಥ ಆದೇಶವನ್ನು ಹೊರಡಿಸಿರುವ ನ್ಯಾಯಾಧಿಕರಣಕ್ಕೆ ಅಪೀಲು ನ್ಯಾಯಾಧಿಕರಣವು ಯೋಗ್ಯವೆಂದು ಭಾವಿಸಬಹುದಾದಂತೆ ಹೆಚ್ಚಿನ ಸಾಕ್ಷ್ಯದ ಅಗತ್ಯವೇನಾದರೂ ಇದ್ದರೆ ಅದನ್ನು ತೆಗೆದುಕೊಂಡ ತರುವಾಯ ಹೊಸ ನಿರ್ಧಾರಕ್ಕಾಗಿ ನಿರ್ದೇಶನಗಳೊಂದಿಗೆ ವಾಪಸು ಕಳುಹಿಸಬಹುದು.

(2) ಒಂದು ಅಪೀಲಿನ ಬಗ್ಗೆ ಅಪೀಲು ನ್ಯಾಯಾಧಿಕರಣದಿಂದ ವಿಚಾರಣೆ ಮಾಡಲಾಗಿದ್ದು ಮತ್ತು ಯಾವುದೇ ಅಂಶದ ಬಗ್ಗೆ ಅದರ ಸದಸ್ಯರಲ್ಲಿ ಭಿನ್ನಾಭಿಪ್ರಾಯವಿರುವಲ್ಲಿ, ಅಂಥ ಅಂಶದ ಮೇಲಿನ ತೀರ್ಮಾನವು, ಬಹುಮತವಿರುವಲ್ಲಿ, ಅಂಥ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ಇರತಕ್ಕುದು ಮತ್ತು ಬಹುಮತವಿಲ್ಲದಿರುವಲ್ಲಿ ಮತ್ತು ಸದಸ್ಯರು ಭಿನ್ನಾಭಿಪ್ರಾಯದಲ್ಲಿ ಸಮಸಮನಾಗಿರುವಲ್ಲಿ, ಅವರು ಪ್ರಕರಣದ ಸಂಗತಿಗಳ ಮತ್ತು ತಾವು ಭಿನ್ನಾಭಿಪ್ರಾಯ ಹೊಂದಿರುವ ಅಂಶ ಅಥವಾ ಅಂಶಗಳ ವಿವರಣೆಯನ್ನು ಬರೆಯತಕ್ಕುದು ಮತ್ತು ಸಂದರ್ಭಾನುಸಾರ, ಅಂಶ ಅಥವಾ ಅಂಶಗಳನ್ನು ಅಥವಾ ಅಪೀಲನ್ನು ಅಂಥ ನ್ಯಾಯಾಧಿಕರಣದ ಅಧ್ಯಕ್ಷನಿಗೆ ಉಲ್ಲೇಖಿಸತಕ್ಕುದು ಮತ್ತು

ಅಂಥ ಉಲ್ಲೇಖವನ್ನು ಸ್ವೀಕರಿಸಿದ ನಂತರ, ನ್ಯಾಯಾಧಿಕರಣದ ಅಧ್ಯಕ್ಷನು, ಅಪೀಲು ನ್ಯಾಯಾಧಿಕರಣದ ಒಬ್ಬ ಅಥವಾ ಹೆಚ್ಚು ಜನ ಸದಸ್ಯರಿಂದ ಅಂಥ ಅಂಶ ಅಥವಾ ಅಂಶಗಳ ಅಥವಾ ಅಪೀಲಿನ ಸುನಾವಣೆಗೆ ಏರ್ಪಾಟು ಮಾಡತಕ್ಕುದು, ಮತ್ತು ಸಂದರ್ಭಾನುಸಾರ, ಅಂಥ ಅಂಶ ಅಥವಾ ಅಂಶಗಳನ್ನು ಅಥವಾ ಅಪೀಲನ್ನು, ಅದನ್ನು ಮೊದಲು ಸುನಾವಣೆ ಮಾಡಿದಂಥವರೂ ಸೇರಿ, ಅಪೀಲನ್ನು ಸುನಾವಣೆ ಮಾಡಿರುವ ಅಪೀಲು ನ್ಯಾಯಾಧಿಕರಣದ ಸದಸ್ಯರ ಬಹುಮತದ ಅಭಿಪ್ರಾಯಕ್ಕೆ ಅನುಸಾರವಾಗಿ ತೀರ್ಮಾನಿಸತಕ್ಕುದು.

(3) ಅಪೀಲು ನ್ಯಾಯಾಧಿಕರಣವು (1)ನೇ ಉಪ-ಪ್ರಕರಣದ ಮೇರೆಗೆ ತಾನು ಹೊರಡಿಸಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅಪೀಲಿನ ಪಕ್ಷಕಾರರಿಗೆ ಮತ್ತು ಸಂಬಂಧಪಟ್ಟ ನ್ಯಾಯಾಧಿಕರಣಕ್ಕೆ ಮತ್ತು ನಿಯಮಿಸಲಾದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳಿಗೆ ಕಳುಹಿಸತಕ್ಕುದು.

(4) ಪ್ರಕರಣವನ್ನು ವಾಪಸು ಕಳುಹಿಸುವ ಆದೇಶದ ಹೊರತು, (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕುದು ಮತ್ತು ಆ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

17. ಅಪೀಲು ನ್ಯಾಯಾಧಿಕರಣಗಳು ಅಧೀಕ್ಷಿಸುವ ಅಧಿಕಾರ :- (1) ಪ್ರತಿಯೊಂದು ಅಪೀಲು ನ್ಯಾಯಾಧಿಕರಣವು ರಾಜ್ಯದಲ್ಲಿನ ಎಲ್ಲ ನ್ಯಾಯಾಧಿಕರಣಗಳ ಮೇಲೆ ಅಧೀಕ್ಷಣೆಯ ಅಧಿಕಾರವನ್ನು ಹೊಂದಿರತಕ್ಕುದು.

(2) ಈ ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಪೀಲು ನ್ಯಾಯಾಧಿಕರಣವು,-

(ಎ) ಯಾವುದೇ ನ್ಯಾಯಾಧಿಕರಣದಿಂದ ವಿವರಪಟ್ಟಿಕೆಗಳನ್ನು ತರಿಸಿಕೊಳ್ಳಬಹುದು;

(ಬಿ) ನ್ಯಾಯಾಧಿಕರಣಗಳ ಪದ್ಧತಿ ಮತ್ತು ವ್ಯವಹರಣೆಗಳನ್ನು ವಿನಿಯಮಿಸುವ ಸಲುವಾಗಿ ಸಾಮಾನ್ಯ ನಿಯಮಗಳನ್ನು ರಚಿಸಬಹುದು ಮತ್ತು ನಮೂನೆಗಳನ್ನು ನಿರ್ದಿಷ್ಟಪಡಿಸಬಹುದು ; ಮತ್ತು

(ಸಿ) ನ್ಯಾಯಾಧಿಕರಣಗಳ ಅಧಿಕಾರಿಗಳು ಇಟ್ಟುಕೊಂಡು ಬರತಕ್ಕ ಪುಸ್ತಕಗಳು, ನಮೂದುಗಳು ಮತ್ತು ಲೆಕ್ಕಪತ್ರಗಳ ನಮೂನೆಗಳನ್ನು ನಿರ್ದಿಷ್ಟಪಡಿಸಬಹುದು.

## ಅಧ್ಯಾಯ-III

## ಎಲ್ಲ ನ್ಯಾಯಾಧಿಕರಣಗಳಿಗೆ ಅನ್ವಯವಾಗುವ ಉಪಬಂಧಗಳು

18. ಪ್ರಕ್ರಿಯೆ :- ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ನ್ಯಾಯಾಧಿಕರಣ ಮತ್ತು ಪ್ರತಿಯೊಂದು ಅಪೀಲು ನ್ಯಾಯಾಧಿಕರಣವು ಅದರ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಅದರ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಉಂಟಾಗುವ ಎಲ್ಲ ವಿಷಯಗಳಲ್ಲಿ ಅದರ ಸ್ವಂತ ಪ್ರಕ್ರಿಯೆಯನ್ನು ವಿನಿಯಮನಗೊಳಿಸುವ ಅಧಿಕಾರವನ್ನು ಹೊಂದಿರತಕ್ಕುದು.

19. ಪ್ರತಿಯೊಂದು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಯು ಕೆಲವು ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯಾಗಿರುವುದು:- ನ್ಯಾಯಾಧಿಕರಣ ಅಥವಾ ಅಪೀಲು ನ್ಯಾಯಾಧಿಕರಣದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ಮತ್ತು ಭಾರತ ದಂಡ ಸಂಹಿತೆ, 1860 (1860ರ 45)ರ 196ನೇ ಪ್ರಕರಣದ ಉದ್ದೇಶಕ್ಕಾಗಿ, ನ್ಯಾಯಿಕ ವ್ಯವಹರಣೆ ಎಂಬುದಾಗಿ ಭಾವಿಸತಕ್ಕುದು ಮತ್ತು ಸಂದರ್ಭಾನುಸಾರ, ಅಂಥ ಪ್ರತಿಯೊಂದು ನ್ಯಾಯಾಧಿಕರಣ ಅಥವಾ ಅಪೀಲು ನ್ಯಾಯಾಧಿಕರಣವನ್ನು 196ನೇ ಪ್ರಕರಣದ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರ 195ನೇ ಪ್ರಕರಣ ಮತ್ತು XXVIನೇ ಅಧ್ಯಾಯದ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯ ಎಂಬುದಾಗಿ ಭಾವಿಸತಕ್ಕುದು.

## ಅಧ್ಯಾಯ-IV

## ನ್ಯಾಯಾಧಿಕರಣಗಳು ಮಾಡಿದ ಆದೇಶಗಳ ಜಾರಿ

20. ಕಾನೂನುಬಾಹಿರ ವಲಸೆಗಾರರನ್ನು ಹೊರದೂಡುವುದು:- (1) ಯಾವನೇ ವ್ಯಕ್ತಿಯನ್ನು ಸಂದರ್ಭಾನುಸಾರ ನ್ಯಾಯಾಧಿಕರಣವು ಅಥವಾ ಅಪೀಲು ನ್ಯಾಯಾಧಿಕರಣವು ಒಬ್ಬ ಕಾನೂನು ಬಾಹಿರ ವಲಸೆಗಾರನೆಂದು ನಿರ್ಧರಿಸಿರುವಲ್ಲಿ, ಕೇಂದ್ರ ಸರ್ಕಾರವು ಅಂಥ ವ್ಯಕ್ತಿಗೆ ಆದೇಶವನ್ನು ಜಾರಿ ಮಾಡುವುದರ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾಂಥ ಕಾಲದೊಳಗೆ ಮತ್ತು ಅಂಥ ಮಾರ್ಗವಾಗಿ ಭಾರತದಿಂದ ಸ್ವತಃ ಹೊರಟುಹೋಗಲು ಅಂಥ ವ್ಯಕ್ತಿಗೆ ನಿರ್ದೇಶಿಸತಕ್ಕುದು ಮತ್ತು ಅದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಬಹುದಾದಂತೆ ಭಾರತದಿಂದ ಅವನನ್ನು ಬೇರೆ ಸ್ಥಳಕ್ಕೆ ಕಳುಹಿಸುವ ಬಗ್ಗೆ ಮತ್ತಷ್ಟು ನಿರ್ದೇಶನಗಳನ್ನು ನೀಡಬಹುದು.

(2) ಪೊಲೀಸು ಸೂಪರಿಂಟೆಂಡೆಂಟನಿಗಿಂತ ಕಡಿಮೆ ದರ್ಜೆಯವನಲ್ಲದ ಯಾವನೇ ಪೊಲೀಸು ಅಧಿಕಾರಿಯು (1)ನೇ ಉಪ-ಪ್ರಕರಣದ

ಮೇರೆಗಿನ ಆದೇಶದ ಯುಕ್ತ ಪಾಲನೆಗಾಗಿ ಯಾವನೇ ವ್ಯಕ್ತಿಯಿಂದ ಬಂಧಪತ್ರವನ್ನು ತೆಗೆದುಕೊಳ್ಳುವ ಮತ್ತು ಅಂಥ ಪೊಲೀಸು ಅಧಿಕಾರಿಗೆ ಮನದಟ್ಟಾಗುವಂತೆ ಅಂಥ ಬಂಧಪತ್ರವನ್ನು ಒದಗಿಸಲು ಅವನು ತಪ್ಪಿದ ಸಂದರ್ಭದಲ್ಲಿ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವ ಅಧಿಕಾರವನ್ನು ಒಳಗೊಂಡು ಅವಶ್ಯವಾಗಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕುದು.

## ಅಧ್ಯಾಯ-V

## ಸಂಕೀರ್ಣ

21. ಅಧಿಕಾರಗಳ ಪ್ರತ್ಯಾಯೋಜನೆ :- ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, 28ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳ ಹೊರತು, ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಮತ್ತು ಈ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು,-

(ಎ) ಕೇಂದ್ರ ಸರ್ಕಾರದ ಯಾವನೇ ಅಧೀನ ಅಧಿಕಾರಿಯು;

(ಬಿ) ಯಾವುದೇ ರಾಜ್ಯ ಸರ್ಕಾರ ಅಥವಾ ಆ ಸರ್ಕಾರದ ಯಾವನೇ ಅಧೀನ ಅಧಿಕಾರಿಯೂ ಸಹ ಚಲಾಯಿಸಬಹುದು ಅಥವಾ ನಿರ್ವಹಿಸಬಹುದು ಎಂದು ನಿರ್ದೇಶಿಸಬಹುದು.

21ಎ. ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಗಳ ವಿರುದ್ಧ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಗಳಿಂದ ಬಂಧಪತ್ರಗಳನ್ನು ತೆಗೆದುಕೊಳ್ಳುವ ಅಧಿಕಾರ :- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದರೂ, ಪೊಲೀಸು ಸೂಪರಿಂಟೆಂಡೆಂಟನಿಗಿಂತ ಕಡಿಮೆ ದರ್ಜೆಯವನಲ್ಲದ ಯಾವನೇ ಪೊಲೀಸು ಅಧಿಕಾರಿಗೆ, ಈ ಅಧಿನಿಯಮದ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಉಲ್ಲೇಖವನ್ನು ಮಾಡಲಾಗಿದೆಯೋ ಅಥವಾ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ವ್ಯಕ್ತಿಯು, ವಿಚಾರಣೆಗಾಗಿ ಲಭ್ಯವಿರಲು ಮತ್ತು ಅಂಥ ಪೊಲೀಸು ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳನ್ನು ಅಥವಾ ಷರತ್ತುಗಳನ್ನು ಪಾಲಿಸಲು ಜಾಮೀನಿನೊಂದಿಗೆ ಅಥವಾ ಅದಿಲ್ಲದೆ ಬಂಧಪತ್ರವನ್ನು ಬರೆದುಕೊಡುವಂತೆ ಅವನನ್ನು ನಿರ್ದೇಶಿಸಲು ಅಗತ್ಯಪಡಿಸುವ ಸಂದರ್ಭಗಳಿವೆ ಎಂದು ಮನದಟ್ಟಾದರೆ ಅವನು ಕಾರಣಗಳನ್ನು ಬರಹದಲ್ಲಿ ದಾಖಲಿಸಿ ಹಾಗೆ ಅವನಿಗೆ ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕುದು:

ಪರಂತು, ಅಂಥ ವ್ಯಕ್ತಿಯು ಅಂಥ ಬಂಧಪತ್ರವನ್ನು ಬರೆದುಕೊಡಲು ತಪ್ಪಿದರೆ ಅವನನ್ನು ದಸ್ತಗಿರಿ ಮಾಡಬಹುದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ತಡೆಹಿಡಿದಿಡಬಹುದು.

22. ಆದೇಶಗಳು ಇತ್ಯಾದಿಗಳನ್ನು ಜಾರಿಗೊಳಿಸುವ ಅಧಿಕಾರ :- ಯಾವುದೇ ಅಧಿಕಾರವನ್ನು ಚಲಾಯಿಸಲು ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅನುಸಾರವಾಗಿ ಅಧಿಕಾರ ನೀಡಿರುವ ಯಾವುದೇ ಪ್ರಾಧಿಕಾರವು, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದ ಯಾವುದೇ ಇತರ ಕ್ರಮದ ಜೊತೆಗೆ, ಅದರ ಅಭಿಪ್ರಾಯದಲ್ಲಿ ಅಂಥ ಅಧಿಕಾರವನ್ನು ಪರಿಣಾಮಕಾರಿಯಾಗಿ ಚಲಾಯಿಸಲು ಯುಕ್ತವಾಗಿ ಅವಶ್ಯವಿರಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಅಥವಾ ಕೈಗೊಳ್ಳುವಂತೆ ಮಾಡಬಹುದು ಮತ್ತು ಅಂಥ ಜಾರಿಯನ್ನು ಒತ್ತಾಯಪಡಿಸಬಹುದು ಅಥವಾ ಒತ್ತಾಯಪಡಿಸುವಂತೆ ಮಾಡಬಹುದು.

23. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ :- ಒಬ್ಬ ವ್ಯಕ್ತಿಯು ಕಾನೂನುಬಾಹಿರ ವಲಸೆಗಾರನೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಯಾವುದೇ ಪ್ರದೇಶದಲ್ಲಿ ನ್ಯಾಯಾಧಿಕರಣ ಅಥವಾ ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸಲಾಗಿರುವಲ್ಲಿ, ಯಾವುದೇ ಸಿವಿಲ್ ನ್ಯಾಯಾಲಯವು, ಆ ಪ್ರದೇಶದಲ್ಲಿ ಆ ವಿಷಯಕ್ಕೆ ಸಂಬಂಧಿಸುವ ಯಾವುದೇ ಪ್ರಶ್ನೆಯನ್ನು ತೆಗೆದುಕೊಳ್ಳುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಆ ವಿಷಯದ ಸಂಬಂಧದಲ್ಲಿ ನ್ಯಾಯಾಧಿಕರಣ ಅಥವಾ ಅಪೀಲು ನ್ಯಾಯಾಧಿಕರಣವು ಕೈಗೊಂಡ ಅಥವಾ ಅವುಗಳ ಮುಂದಿರುವ ಯಾವುದೇ ಕ್ರಮದ ಸಂಬಂಧದಲ್ಲಿ ನಿರ್ಬಂಧಾಜ್ಞೆ ಅಥವಾ ಯಾವುದೇ ಇತರ ಆದೇಶವನ್ನು ಯಾವುದೇ ಸಿವಿಲ್ ನ್ಯಾಯಾಲಯವು ನೀಡತಕ್ಕುದಲ್ಲ ಅಥವಾ ಮಾಡತಕ್ಕುದಲ್ಲ.

24. ಮಧ್ಯಕಾಲೀನ ಉಪಬಂಧಗಳು :- ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯು, ಸಿವಿಲ್ ನ್ಯಾಯಾಲಯದಲ್ಲಾಗಲಿ ಅಥವಾ ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸ್ಥಾಪಿಸಿದ ಯಾವುದೇ ನ್ಯಾಯಾಧಿಕರಣದಲ್ಲಾಗಲಿ ಇತ್ಯರ್ಥವಾಗದೆ ಉಳಿದಿದ್ದೂ ಒಬ್ಬ ವ್ಯಕ್ತಿಯು ಕಾನೂನುಬಾಹಿರ ವಲಸೆಗಾರನೇ ಅಥವಾ ಅಲ್ಲವೇ ಎಂಬ ಪ್ರಶ್ನೆಯು ಉದ್ಭವಿಸಿರುವಲ್ಲಿ, ಅಂಥ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು, ಅಂಥ ಪ್ರಶ್ನೆಯನ್ನು ತೀರ್ಮಾನಿಸದೇ, ಅಂಥ ನ್ಯಾಯಾಲಯ ಅಥವಾ ಇತರ ನ್ಯಾಯಾಧಿಕರಣವು ಈ ಅಧಿನಿಯಮದ ಮೇರೆಗಿನ ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯ ಪ್ರಾದೇಶಿಕ ಪರಿಮಿತಿಗಳಲ್ಲಿ ಬರುವುದೋ ಆ ನ್ಯಾಯಾಧಿಕರಣಕ್ಕೆ ಅಂಥ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ವರ್ಗಾವಣೆ ಮಾಡುವ ಒಂದು ಆದೇಶವನ್ನು ಮಾಡತಕ್ಕುದು ಮತ್ತು ಅಂಥ ವರ್ಗಾವಣೆಯ ನಂತರ ಅಂಥ ಪ್ರಶ್ನೆಯ ಬಗ್ಗೆ ಅಂಥ ನ್ಯಾಯಾಧಿಕರಣವು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವ್ಯವಹರಿಸತಕ್ಕುದು.

25. ದಂಡಗಳು :- (ಎ) 20ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಪ್ರಯತ್ನಿಸುವ, ಅಥವಾ ಉಲ್ಲಂಘನೆ ಮಾಡಲು ದುಷ್ಪ್ರೇರಿಸುವ; ಅಥವಾ

(ಬಿ) ಯಾವುದೇ ಅಂಥ ಆದೇಶದ ಮೂಲಕ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು ವಿಫಲನಾಗುವ; ಅಥವಾ

(ಸಿ) 20ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿರುವ ಯಾವನೇ ವ್ಯಕ್ತಿಗೆ ಆಶ್ರಯ ಕೊಡುವ

ಅಥವಾ ಯಾವುದೇ ಅಂಥ ಆದೇಶದ ಮೂಲಕ ನೀಡಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ

- ಯಾವನೇ ವ್ಯಕ್ತಿಯು,ಒಂದುವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಜುಲ್ಮಾನೆಯಿಂದ ದಂಡನೀಯನಾಗತಕ್ಕದು:

ಪರಂತು, ನ್ಯಾಯಾಲಯವು ತೀರ್ಪಿನಲ್ಲಿ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ನಮೂದಿಸಿ, ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಕಾರವಾಸದ ಶಿಕ್ಷೆಯನ್ನು ಅಥವಾ ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾದ ಜುಲ್ಮಾನೆಯನ್ನು ವಿಧಿಸಬಹುದು.

26. ಸದ್ಭಾವನೆಯಿಂದ ಕೈಗೊಳ್ಳಲಾದ ಯಾವುದೇ ಕ್ರಮದ ರಕ್ಷಣೆ :- (1) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಯಾವನೇ ವ್ಯಕ್ತಿಯ ವಿರುದ್ಧವಾಗಿ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

27. ತೊಂದರೆಗಳನ್ನು ನಿವಾರಿಸುವ ಅಧಿಕಾರ :- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸತಕ್ಕ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯವಾಗಿದೆಯೆಂದು ಅಥವಾ ಯುಕ್ತವಾಗಿರುವುದೆಂದು ಅದಕ್ಕೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಆದೇಶವನ್ನು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕುದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕುದು.

28. ನಿಯಮಗಳನ್ನು ರಚಿಸಲು ಅಧಿಕಾರ :- (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ :-

(ಎ) 8ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ಅರ್ಜಿಯನ್ನು ಸಲ್ಲಿಸತಕ್ಕ ನಮೂನೆ ಮತ್ತು ವಿಧಾನ ಮತ್ತು ಅಂಥ ಅರ್ಜಿಯ ಜೊತೆಯಲ್ಲಿ ಸಂದಾಯ ಮಾಡತಕ್ಕ ಫೀಜು;

(ಎಎ) 8ಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಬಹುದಾದಂಥ ನಮೂನೆ ಮತ್ತು ರೀತಿ, ಮತ್ತು ಘೋಷಣೆಯನ್ನು ಮಾಡಬಹುದಾದಂಥ ನಮೂನೆ;

(ಬಿ) 11, 12 ಮತ್ತು 16ನೇ ಪ್ರಕರಣಗಳ ಮೇರೆಗೆ ನಿಯಮಿಸಲಾಗುವ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು;

(ಸಿ) 15ನೇ ಪ್ರಕರಣದ (8)ನೇ ಉಪ-ಪ್ರಕರಣಗಳ ಮೂಲಕ ಅಗತ್ಯಪಡಿಸಿರುವಂತೆ ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸಬಹುದಾದ ಅಪೀಲಿನ ನಮೂನೆ ಮತ್ತು ವಿಧಾನ ಮತ್ತು ಅಂಥ ಅಪೀಲಿನ ಜೊತೆಯಲ್ಲಿ ಸಂದಾಯವಾಗಬೇಕಾದ ಫೀಜು;

(ಸಿಎ) 21ಎ ಪ್ರಕರಣದ ಪರಂತುಕದ ಮೇರೆಗೆ ದಸ್ತಗಿರಿ ಮಾಡುವ ಮತ್ತು ತಡೆಹಿಡಿದಿಡುವ ರೀತಿ;

(ಡಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳವರೆಗೆ ಇರಿಸತಕ್ಕುದು; ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ

ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗದಂತೆ ಇರತಕ್ಕುದು.

29. ನಿರಸನಗಳು ಮತ್ತು ಉಳಿಸುವಿಕೆಗಳು :- (1) ಕಾನೂನುಬಾಹಿರ ವಲಸೆಗಾರರ (ನ್ಯಾಯಾಧಿಕರಣಗಳ ಮೂಲಕ ನಿರ್ಧಾರ) ಅಧ್ಯಾದೇಶ, 1983 (1983ರ 8) ಇದು ಈ ಮೂಲಕ ನಿರಸಿತವಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕುದು.

*  *  *

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ, ಬೆಂಗಳೂರು-1. ಕಾ.ಸೂ. ಪಿ.799